## ಕರ್ನಾಟಕ ಸರ್ಕಾರ

ಇ-ಕಛೇರಿ ಸಂ: ಇಡಿ 369 ಯುಬಿವಿ 2022

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:21.09.2022

**ಇಂದ**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು

**ಇವರಿಗೆ**
ಕುಲಸಚಿವರು,
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು.

ಮಾನ್ಯರೇ,

ವಿಷಯ: ಶ್ರೀ ಸರ್ವಜ್ಞ ಕಾಲೇಜ್ ಆಫ್ ಎಜುಕೇಷನ್‌ಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡುವ ಬಗ್ಗೆ ನೀಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021, ದಿನಾಂಕ:12.02.2021
2. ತಮ್ಮ ಪತ್ರ ಸಂಖ್ಯೆ:ಎಸಿಎ-3/ಎ3/ಶಾ.ಸಂ.ಪ್ರು./6/2022-23, ದಿನಾಂಕ:01.07.2022

*****

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೆ ಹಾಗೂ ಸಂಯೋಜನೆಗೊಳಪಡುವ **ಶ್ರೀ ಸರ್ವಜ್ಞ ಕಾಲೇಜ್ ಆಫ್ ಎಜುಕೇಷನ್**, ಎಂ.ಆರ್.ಸಿ.ಆರ್ ಬಡಾವಣೆ, ನಾಗರಭಾವಿ ರಸ್ತೆ, ವಿಜಯನಗರ, ಬೆಂಗಳೂರು-560 040 ಇಲ್ಲಿ ಅಸ್ತಿತ್ವದಲ್ಲಿರುವ ಬಿ.ಇಡಿ. ಕೋರ್ಸಿನ ಶಾಶ್ವತ ಸಂಯೋಜನೆಯನ್ನು 2022-23ನೇ ಶೈಕ್ಷಣಿಕ ಸಾಲಿನಿಂದ ನವೀಕರಿಸುವ ಬಗ್ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(11) ಜೊತೆಯಲ್ಲಿ ಓದಲಾದ ಪ್ರಕರಣ 62(1)ರಡಿ ಅಗತ್ಯವಾಗುವ ಶಿಫಾರಸ್ಸನ್ನು ಕೋರಿ, ಕಾಲೇಜಿನ ಅರ್ಜಿ, ಸ್ಥಳೀಯ ವಿಚಾರಣೆ ಸಮಿತಿಯ ವರದಿ ಹಾಗೂ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ತುಗಳ ಗೊತ್ತುವಳಿಗಳ ದಾಖಲೆಗಳೊಂದಿಗೆ, ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸಿರುವ ಪ್ರಪತ್ರಗಳಲ್ಲಿ ಉಲ್ಲೇಖ(2)ರ ಪತ್ರದನ್ವಯ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಸ್ಥಳೀಯ ವಿಚಾರಣೆ ಸಮಿತಿಯ ಅವಲೋಕನೆ ಮತ್ತು ತೀರ್ಮಾನಗಳನ್ನು ಪರಿಗಣಿಸಿದ ತರುವಾಯ ಬೆಂಗಳೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳು ಅಂಗೀಕರಿಸಿದ ಗೊತ್ತುವಳಿಗಳನ್ನು ಅನುಸರಿಸಿ ಹಾಗೂ ಶೈಕ್ಷಣಿಕ/ಭೌತಿಕ ಹಾಗೂ ನಾಗರೀಕ ಮೂಲಸೌಕರ್ಯಗಳ ಲಭ್ಯತೆ ಹಾಗೂ ಗುಣಮಟ್ಟದ ಕಾರ್ಯನಿರ್ವಹಣೆಯ ಖಚಿತತೆಗಾಗಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಲಾದ ನಿಯತಾಂಕಗಳ ಹಾಗೂ ಸೂಚ್ಯಾಂಕಗಳ ಪೂರೈಕೆಯನ್ನು ದೃಢಪಡಿಸಿಕೊಂಡು, ಷರತ್ತುಗಳಿಗೆ ಒಳಪಟ್ಟು ಪ್ರಸ್ತಾವನೆಯನ್ನು ಪರಿಗಣಿಸಲಾಗಿದೆ.

ತತ್ಪರಿಣಾಮವಾಗಿ, **ಶ್ರೀ ಸರ್ವಜ್ಞ ಕಾಲೇಜ್ ಆಫ್ ಎಜುಕೇಷನ್**, ಎಂ.ಆರ್.ಸಿ.ಆರ್ .ಬಡಾವಣೆ, ನಾಗರಭಾವಿ ರಸ್ತೆ, ವಿಜಯನಗರ, ಬೆಂಗಳೂರು-560 040 ಇಲ್ಲಿ ಅಸ್ತಿತ್ವದಲ್ಲಿರುವ ಬಿ.ಇಡಿ. ಕೋರ್ಸಿನ ಶಾಶ್ವತ ಸಂಯೋಜನೆಯನ್ನು 50 ವಿದ್ಯಾರ್ಥಿ ಪ್ರಮಾಣಕ್ಕೆ ಅನ್ವಯಿಸುವಂತೆ 2022-23ನೇ ಶೈಕ್ಷಣಿಕ ಸಾಲಿನಿಂದ 5 ವರ್ಷಗಳ ಅವಧಿಗೆ ನವೀಕರಿಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(11) ಜೊತೆಯಲ್ಲಿ ಓದಲಾದ ಪ್ರಕರಣ 62(1)ರಡಿ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ಕಟ್ಟಡ ಸುರಕ್ಷತೆ/ಸಂರಚನೆ ಸ್ಥಿರತೆ ಪ್ರಮಾಣಪತ್ರವನ್ನು 6 ತಿಂಗಳುಗಳ ಒಳಗಾಗಿ ಲೋಕೋಪಯೋಗಿ ಇಲಾಖೆಯಿಂದ ಪಡೆಯತಕ್ಕದ್ದು. ಯುಜಿಸಿ ವಿನಿಮಯಗಳನ್ವಯ ಅಗತ್ಯವಾಗುವ ಮುಚ್ಚಳಿಕೆ ಕಾರ್ಯಗತಗೊಳಿಸುವಿಕೆ ನಿಯತಾಂಕ ಹಾಗೂ ಪ್ರತಿ ವಿದ್ಯಾರ್ಥಿ ತಲಾವಾರು ಪ್ರಯೋಗಾಲಯ ಲಭ್ಯತೆ ನಿಯತಾಂಕವನ್ನು 6 ತಿಂಗಳುಗಳ ಒಳಗಾಗಿ ಪೂರೈಸತಕ್ಕದ್ದು. ಕಾಲೇಜಿನ ಜಮೀನಿನ ಲೀಸ್ ಅವಧಿಯನ್ನು ಒಂದು ವರ್ಷದೊಳಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನವೀಕರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ, ಹೊಸ ಕೋರ್ಸ್ ಸಂಯೋಜನೆಗೆ ಈ ಪತ್ರದನ್ವಯ ಮಾಡಲಾಗಿರುವ ಶಿಫಾರಸ್ಸು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತವೆ.

6 ತಿಂಗಳುಗಳ ಒಳಗಾಗಿ ವಿಕಲಚೇತನರ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು. ಅನುಭವಿ ಬೋಧಕರನ್ನು ಹೆಚ್ಚುವರಿಯಾಗಿ ನೇಮಿಸಿಕೊಳ್ಳತಕ್ಕದ್ದು. ಹಿಂದಿನ ಸ್ಥಳೀಯ ವಿಚಾರಣೆ ಸಮಿತಿಯ ವರದಯಲ್ಲಿನ ಷರತ್ತುಗಳನ್ನು 3 ತಿಂಗಳ ಒಳಗಾಗಿ ಪೂರೈಸತಕ್ಕದ್ದು. ಸ್ಥಳೀಯ ವಿಚಾರನೆ ಸಮಿತಿಯ ಎಲ್ಲಾ ಷರತ್ತುಗಳನ್ನು 3 ತಿಂಗಳ ಒಳಗಾಗಿ ಪೂರೈಸತಕ್ಕದ್ದು.

ಶಾಶ್ವತ ಸಂಯೋಜನೆ ಮಂಜೂರಾತಿ ಹಾಗೂ ನವೀಕರಣಕ್ಕೆ ಅಗತ್ಯವಾಗುವ ಈ ಕೆಳಕಂಡ ಷರತ್ತುಗಳನ್ನು ಪೂರೈಸತಕ್ಕದ್ದು

1. ಸಮಗ್ರ ಶೈಕ್ಷಣಿಕ ಹಾಗೂ ಭೌತಿಕ ಮೂಲಸೌಕರ್ಯಗಳನ್ನು ಕಲ್ಪಿಸತಕ್ಕದ್ದು;
2. ಖಾಯಂ ಬೋಧಕ ಸಿಬ್ಬಂದಿಗೆ ಯುಜಿಸಿ ವೇತಶ್ರೇಣಿಯಲ್ಲಿ ಹಾಗೂ ಬೋಧಕೇತರ ಸಿಬ್ಬಂದಿಗೆ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪಾವತಿಸತಕ್ಕದ್ದು;
3. ಕಾಲೇಜು ಕೌನ್ಸಿಲ್ ಅನ್ನು ಸ್ಥಾಪಿಸಲಾಗದಿದ್ದಲ್ಲಿ,ಕೂಡಲೇ ಸ್ಥಾಪಿಸಿ, ನಿಯತಕಾಲಿಕವಾಗಿ ಸಭೆಗಳನ್ನು ನಡೆಸತಕ್ಕದ್ದು

ತಪ್ಪಿದಲ್ಲಿ 2023-24ನೇ ಸಾಲಿನಿಂದ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೂಚನೆ ನೀಡಲಾಗಿದೆ

--3

**ಶ್ರೀ ಸರ್ವಜ್ಞ ಕಾಲೇಜ್ ಆಫ್ ಎಜುಕೇಷನ್**ಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣವನ್ನು ಮಂಜೂರು ಮಾಡುವುದು ಸ್ಥಳೀಯ ವಿಚಾರಣೆ ಸಮಿತಿಯ ಷರತ್ತುಗಳು ಸೇರಿದಂತೆ ಈ ಕೆಳಕಂಡ ಎಲ್ಲಾ ಷರತ್ತುಗಳನ್ನು ಪಾಲಿಸುವ ನಿಬಂಧನೆಗೆ ಒಳಪಟ್ಟಿರುತ್ತದೆ.

1 ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು;

2 ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

3 ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

4 ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

5 ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು

6 ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ;

7 ದಿನಾಂಕ: 13-8-1997 ರಂದು ವಿಶಾಖ v/s ರಾಜಸ್ತಾನ ಸರ್ಕಾರ ಮೊಕದ್ದಮ್ಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

8 ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಲಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು;

9 ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

10 ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ

--4

ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು. ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ;

11 ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ;

12 ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ನಂಬುಗೆಯ

(ಶೀತಲ್ ಎಂ. ಹಿರೇಮಠ.)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು-1)

ಪ್ರತಿ:

1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು-560 001

2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

3)ಪ್ರಾಂಶುಪಾಲರು, **ಶ್ರೀ ಸರ್ವಜ್ಞ ಕಾಲೇಜ್ ಆಫ್ ಎಜುಕೇಷನ್,** ಎಂ.ಆರ್.ಸಿ.ಆರ್.ಬಡಾವಣೆ, ನಾಗರಭಾವಿ ರಸ್ತೆ, ವಿಜಯನಗರ, ಬೆಂಗಳೂರು-560 040

4) ಇ-ಸಮನ್ವಯಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ ಇವರಿಗೆ(ಉನ್ನತ ಶಿಕ್ಷಣ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು)